ದಿನಾಂಕಃ 12-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ಜಮಿನಿನಲ್ಲಿ ವ್ಯವಸಾಯ ಮಾಡಿಸುತ್ತೇನೆ. ನನಗೆ ಸೇರಿದ ಆಸ್ತಿಯ ಸರ್ವೇ ನಂ. 283 ಆಗಿರುತ್ತದೆ. ಸದರಿ ಆಸ್ತಿ ಹಂಪಾಪುರ ಗ್ರಾಮದಲ್ಲಿ ಇರುತ್ತದೆ. ಸದರಿ ಆಸ್ತಿಯ ವಿಸ್ತೀರ್ಣ 1 ಎಕರೆ 23 ಗುಂಟೆ ಇರುತ್ತದೆ. ನನಗೆ ಆಸ್ತಿ ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುವುದಿಲ್ಲ, ನನಗೆ ಇಬ್ಬರು ಹೆಣ್ಣು ಮಕ್ಕಳು. ಒಬ್ಬ ಹೆಣ್ಣುಮಗಳಿಗೆ ಮದುವೆ ಮಾಡಿರುತ್ತೇನೆ. ಮತ್ತೊಂದು ಹೆಣ್ಣುಮಗಳು ವಿದ್ಯಾಭ್ಯಾಸ ಮಾಡುತ್ತಿಲ್ಲ. ನನಗೆ ಸೇರಿದ ಆಸ್ತಿಯಲ್ಲಿ ಭತ್ತ ಮತ್ತು ತರಕರಾರಿ ಬೆಳೆಯುತ್ತೇನೆ. ನನಗೆ ವ್ಯವಸಾಯದಿಂದ ವಾರ್ಷಿಕವಾಗಿ ರೂ. 2-3 ಲಕ್ಷ ಆದಾಯ ಇರುತ್ತದೆ. ಆದಾಯ ಇರುವ ಬಗ್ಗೆ ರೈತನಾಗಿರುವ ಕಾರಣ ದಾಖಲೆ ಇರುವುದಿಲ್ಲ. ವ್ಯವಸಾಯಕ್ಕಾಗಿ ವಾರ್ಷಿಕವಾಗಿ ರೂ. 1 ಲಕ್ಷ ಖರ್ಚು ಆಗುತ್ತದೆ. ವಾರ್ಷಿಕವಾಗಿ ಮನೆ ಖರ್ಚು ರೂ. 50,000/- ಬರುತ್ತದೆ. ನನಗೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹಂದಿ ಸಾಕಾಣಿಕೆ ಫಾರ್ಮ ಹೌಸ ಇರುತ್ತದೆ ಆದರೆ ದಾಖಲೆ ಇರುವುದಿಲ್ಲ.

2) ನಾನು ರುಕ್ಮೀಣಿ ರವರ ವಿರುದ್ಧ ಸಿಸಿ ನಂ. 316/2024 ಪ್ರಕರಣವನ್ನು ರೂ. 3 ಲಕ್ಷ ಹಣಕ್ಕಾಗಿ ದಾಖಲು ಮಾಡಿರುತ್ತೇನೆ ಎಂದರೆ ಸರಿ. ಆರೋಪಿ ನಮ್ಮ ಗ್ರಾಮದವರು. ಆರೋಪಿಯ ಗಂಡನ ಹೆಸರು ಪ್ರವೀಣ. ಹಂಪಾಪುರ ಗ್ರಾಮದ ಲತಾಮಣಿ ರವರು ಪರಿಚಯ ಇರುತ್ತಾರೆ. ಸಾಕ್ಷಿಯು ಲತಾಮಣಿ ರವರ ಭಾವಚಿತ್ರವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಶಾನೆ.ಪಿ-6** ಎಂದು ಗುರುತಿಸಲಾಯಿತು. ಲತಾಮಣಿ ರವರ ಬಳಿ ಆರೋಪಿ, ರೇಣುಕ ಕೋಂ ಲೋಕೇಶ, ಭಾಗ್ಯ ಕೋಂ ಮಹದೇವ, ಸುಗುಣಾ ಕೋಂ ಸ್ವಾಮಿನಾಯಕ ರವರು L & T ಕಂಪನಿಯಲ್ಲಿ ತಲಾ

ರೂ. 50,000/- ಸಾಲವಾಗಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಲತಾಮಣಿ ರವರಿಗೆ ಸಾಲಕ್ಕಾಗಿ ನೀಡಿದ ಚೆಕ್ಕನು ನಾನು ಪಡೆದುಕೊಂಡು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಸಾಲ ತೀರಿಸುವ ಸಲುವಾಗಿ ನನ್ನಿಂದ ಹಣ ಪಡೆದುಕೊಂಡಿರುತ್ತಾರೆ. ನಾನು ಆರೋಪಿ ಹಣವನ್ನು ಸಾಲವಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 22.01.2025 ರಂದು ಆರೋಪಿಗೆ ನಾನು ಹಣವನ್ನು ನೀಡಿರುತ್ತೇನೆ.

3) ನನಗೆ ಆರೋಪಿಗೆ ಸಾಲ ನೀಡುವ ಆರ್ಥಿಕ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ರೂ. 6 ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ.ನಾನು ವ್ಯಾಪಾರ ಮಾಡುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ಆರೋಪಿಗೆ ತಿಳುವಳಿಕೆ ಪತ್ರ ಜಾರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಲತಾಮಣಿ ಅಕ್ರಮ ಲಾಭ ಪಡೆಯನ್ನು ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಓ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ